**OS. No.23/2021** **PW – 4**

ಪ್ರಮಾಣೀಕರಿಸಲಾದ ದಿನಾಂಕಃ **20.08.2025.**

<u>ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ. ಕೆ. ಪಿ. ಬಿ. ವಕೀಲರಿಂದಃ</u>

1 ಮತ್ತು 3 ನೇ ಪ್ರತಿವಾದಿಯನ್ನು ಕೆ. ಬಾಡಗ ಪಂಚಾಯಿತಿ ಕಚೇರಿಯಲ್ಲಿ 2021 ಏಪ್ರಿಲ್ ಅಥವಾ ಮೇ ತಿಂಗಳಲ್ಲಿ ನೋಡಿದ್ದೇನೆ. ಇವರುಗಳನು ನಮ್ಮ ಕಚೇರಿಗೆ ಮನೆ ಕಂದಾಯ ಕಟ್ಟಲು ಬಂದಿರುತ್ತಾರೆ. ದಾವಾಸ್ವತ್ತಿನ ಮನೆಗೆ ಕಂದಾಯ ಯಾರು ಕಟ್ಟಿದ್ದಾರೆ ಎಂದು ನಮ್ಮ ಕಚೇರಿಯಲ್ಲಿ ದಾಖಲೆ ಇರುತ್ತದೆ ಎಂದರೆ ಸರಿ. ಇವರುಗಳು ಹಳೇ ಕಂದಾಯ ದಾಖಲೆಗಳು ಕೊಡಲು ಅರ್ಜಿ ಕೊಟ್ಟಿದ್ದರು. ದಾಖಲೆಯಂತೆ ಪ್ರತಿವಾದಿಗಳ ಹೆಸರಿನಲ್ಲಿ ದಾವಾ ಮನೆ ಇರಲಿಲ್ಲ. 2015-16 ರಿಂದ 1 ನೇ ವಾದಿಯ ಗಂಡ ಹೆಸರು ಆ ಮೊದಲು ಇತ್ತು. ಅವರ ಪೌತಿ ನಂತರ 2 ನೇ ವಾದಿಯ ಹೆಸರಿನಲ್ಲಿ ಕಂದಾಯ ದಾಖಲೆ ಇರುತ್ತದೆ. 1 ನೇ ವಾದಿಯ ಗಂಡ ಹೆಸರಿನಲ್ಲಿ 2 ನೇ ವಾದಿ ಕಂದಾಯ ಕಟ್ಟುತ್ತಿದ್ದಾನೆ. 2015 ರಿಂದ ಇಚೆಗೆ ಈ ಕಂದಾಯ ದಾಖಲೆ ನೋಡಿರುತ್ತೇನೆ. ಹಿಂದಿನ ಕಂದಾಯ ದಾಖಲೆ ನೋಡಿಲ್ಲ ಅದು ನಾಲ್ಕೇರಿ ಗ್ರಾಮ ಪಂಚಾಯಿತಿಯಲ್ಲಿತ್ತು.

ಕಂದಾಯ ದಾಖಲೆ ರಿಜಿಸ್ಟರ್ ಸಾರ್ವಜನಿಕ ದಾಖಲೆ ಎಂದರೆ ಸರಿ. ಅದು ಸಾರ್ವಜನಿಕರಿಗೆ ದೃಢೀಕರಿಸಿ ಕೊಡಬಹುದು ಎಂದರೆ ಸರಿ. ನಾನು ಪ್ರತಿವಾದಿಗಳು ಕೋರಿದ ಅರ್ಜಿಯಂತೆ ದಾಖಲ ಕೊಟ್ಟಿರುತ್ತೇನೆ, ಕೊಟ್ಟಿರುವ ಬಗ್ಗೆಯೂ ದಾಖಲೆ ಇದೆ, ಆದಾಖಲೆ ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ಸರಿ. 2 ನೇ ವಾದಿ ಜೊತೆ ಶಾಮೀಲಾಗಿ ಪ್ರತಿವಾದಿಗಳಿಗೆ ಯಾವುದೇ ದಾಖಲೆ ಒದಗಿಸಿಕೊಟ್ಟಿಲ್ಲ ಎಂದರೆ ಸರಿಯಲ್ಲ. 2 ವರ್ಷಗಳ ಕಾಲ ನಾನು ಕೆ. ಬಾಡಗ ಪಂಚಾಯಿತಿಯಲ್ಲಿ ಕಾರ್ಯ ನಿರ್ವಹಿಸಿದ್ದೇನೆ. ಕೆ. ಬಾಡಗ ಪಂಚಾಯಿತಿ ವ್ಯಾಪ್ತಿಯ ಗ್ರಾಮಸ್ಥರು ಎಲ್ಲರೂ ಗೊತ್ತು. ದಾವಾಸ್ತಿಯಲ್ಲಿ ಒಂದು ಹಂಚಿನ ಮನೆ ಇದೆ. ಕಂದಾಯ ವಸೂಲಿ ಮಾಡುವ ಮುನ್ನ ಜಾಗದ ಆರ್ ಟಿ ಸಿ ಯಾರ ಹೆಸರಿನಲ್ಲಿ ಇದೆ ಎಂದು ದೃಢಪಡಿಸಿಕೊಂಡಿರುತ್ತೇವೆ ಎಂದರೆ ಸರಿ, ಆದರೆ ಈಗಾಗಲೇ ಮನೆ ಕಂದಾಯ ರಿಜಿಸ್ಟರ್ ನಲ್ಲಿ ಆ ವಿವರ ದಾಖಲಾಗಿದೆ.

ಕಂದಾಯ ಕಟ್ಟುವ ವ್ಯಕ್ತಿ ಮೃತನಾದರೆ ಅವರ ವಾರಸುದಾರರ ಹೆಸರುಗಳನ್ನು ಕಂದಾಯ ರಿಜಿಸ್ಟರ್ ನಲ್ಲಿ ಬರೆಯಬೇಕಾಗುತ್ತದೆ ಎಂದರೆ ಸರಿ. ನಾನು ಕೆ. ಬಾಡಗ ಪಂಚಾಯಿತಿಯಲ್ಲಿ PDO ಆಗುವ ಮುನ್ನವೇ 1 ನೇ ವಾದಿಯ ಗಂಡ ತೀರಿಹೋಗಿದ್ದ. ಪ್ರತಿವಾದಿಗಳು ನಮ್ಮ ಕಚೇರಿಗೆ ಬಂದಾಗ ಮೃತವಾದ ಮಾಹಿತಿ ಕೊಟ್ಟರು ಎಂದರೆ ಸರಿ, ನಾನು ಯಾವುದೇ ಕ್ರಮ ಕೈ ಗೊಂಡಿಲ್ಲ ಎಂದರೆ 2 ನೇ ವಾದಿ ಪೌತಿ ಖಾತಾ ಅರ್ಜಿ ಕೊಟ್ಟಿದ್ದು ಅದು ಬಾಕಿ ಇದ್ದ ಕಾರಣಕ್ಕೆ ಯಾವುದೇ ಕ್ರಮ ಕೈ ಗೊಂಡಿಲ್ಲ . ಮನೆ ವ್ಯಾಪ್ತಿ ಮಾತ್ರ ಪಂಚಾಯಿತಿಯಲ್ಲಿದ್ದು ಉಳಿದ ಕಂದಾಯ ಜಮೀನು ನಮಗೆ ಬರುವುದಿಲ್ಲ, ಆದ್ದರಿಂದ ದಾವಾ ಸ್ವತ್ತು 50 ಸೆಂಟ್ ಬಗ್ಗೆ ನಮ್ಮ ಕಚೇರಿಯಲ್ಲಿ ದಾಖಲೆ ಇರುವುದಿಲ್ಲ ಮತ್ತು ನನಗೆ ಗೊತ್ತಿಲ್ಲ.

ಪ್ರಮಾಣ ಪತ್ರವನ್ನು ವಕೀಲರು ತಯಾರಿಸಿರುತ್ತಾರೆ ನಾನು ಸಹಿ ಮಾಡಿರುತ್ತೇನೆ. 2 ನೇ ವಾದಿಯ ಜೊತೆ ನಾನು ಚೆನ್ನಾಗಿದ್ದೆ ಎಂದರೆ ಸರಿಯಲ್ಲ. ಈ ಪ್ರಕರಣದ ಬಗ್ಗೆ 2 ನೇ ವಾದಿ ತಿಳಿಸಿದರು ಎಂದರೆ ಸರಿ. ಅವರ ಕೋರಿಕೆಯಂತೆ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿ. ಇಂತಹ ರೀತಿಯ ಸಾಕ್ಷ್ಯ ನಾನು ಎಲ್ಲೂ ಕೊಟ್ಟಿಲ್ಲ. 2 ನೇ ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

Sd/-
ಸಿವಿಲ್ ನ್ಯಾಯಾಧೀಶರು, ಪೊನ್ನಂಪೇಟೆ.